# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 591 |
| ಸದಸ್ಯರ ಹೆಸರು | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 20-08-2026 |
| ಉತ್ತರಿಸುವ ಸಚಿವರು | ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಬೆಳೆಗಳನ್ನು ಕಾಡುಪ್ರಾಣಿಗಳಿಂದ ರಕ್ಷಿಸಿಕೊಳ್ಳಲು ಕಾನೂನು ಬದ್ಧವಾಗಿ ಪರವಾನಿಗೆ ಪಡೆದ ಬಂದೂಕುಗಳನ್ನು ಹೊಂದಿರುವ ರೈತರು ಕಳೆದ ಒಂದು ವರ್ಷದಿಂದ ತಮ್ಮ ಶಸ್ತ್ರಾಸ್ತ್ರ ಪರವಾನಿಗೆಗಳ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ (NOC) ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಶಸ್ತ್ರಾಸ್ತ್ರ ಪರವಾನಿಗೆಗಳ ನವೀಕರಣಕ್ಕಾಗಿ ಜಿಲ್ಲಾಧಿಕಾರಿ ಕಛೇರಿಯಿಂದ ಸ್ವೀಕೃತಗೊಂಡ ಅರ್ಜಿಗಳು ವಿಳಂಬವಾಗದೆ ನಿಗದಿತ ಸಮಯದಲ್ಲಿ ಪೊಲೀಸ್ ಇಲಾಖೆಯಿಂದ ನಿರಾಕ್ಷೇಪಣಾ ವರದಿಯನ್ನು ಜಿಲ್ಲಾಧಿಕಾರಿ ಕಛೇರಿಗಳಿಗೆ ಸಲ್ಲಿಸಲಾಗುತ್ತಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಬಂದೂಕು ಪರವಾನಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ನವೀಕರಿಸಲಾದ ಪರವಾನಗಿಗಳ ಸಂಖ್ಯೆ ಹಾಗೂ NOC ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಬಂದೂಕು ಪರವಾನಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ನವೀಕರಿಸಲಾದ ಪರವಾನಿಗೆಗಳ ಸಂಖ್ಯೆ ಹಾಗೂ NOC ಬಾಕಿ ಇರುವ ಅರ್ಜಿಗಳ ಸಂಖ್ಯೆ ತಾಲ್ಲೂಕುವಾರು ವಿವರಗಳನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಇ) | ಪೊಲೀಸ್ ಇಲಾಖೆಯಿಂದ NOC ನೀಡುವಲ್ಲಿ ವಿಳಂಬವಾಗಲು ಕಾರಣಗಳೇನು; ಅರ್ಜಿಗಳ ವಿಲೇವಾರಿಗೆ ನಿಗದಿತ ಕಾಲಮಿತಿ ಇದೆಯೇ; | ಜಿಲ್ಲಾಧಿಕಾರಿಯವರ ಕಛೇರಿಯಿಂದ ಅರ್ಜಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗಾಗಿ ಪೊಲೀಸ್ ಇಲಾಖೆಯಿಂದ ಅಭಿಪ್ರಾಯ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಲಾಗುತ್ತಿದೆ. |
| ಈ) | ಕಾಡು ಪ್ರಾಣಿಗಳ ಹಾವಳಿಯಿಂದ ಕೃಷಿಗೆ ಹಾನಿಯಾಗುತ್ತಿರುವ ಹಿನ್ನೆಲೆಯಲ್ಲಿ ರೈತರಿಗೆ ಆಗುತ್ತಿರುವ ತೊಂದರೆಯನ್ನು ಪರಿಗಣಿಸಿ ಬಾಕಿ ಇರುವ ಅರ್ಜಿಗಳನ್ನು ತ್ವರಿತವಾಗಿ NOC ನೀಡಲು ಹಾಗೂ ಪರವಾನಿಗೆ ನವೀಕರಣ ಪ್ರಕ್ರಿಯೆಯನ್ನು ಸರಳೀಕರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ; | ಶಸ್ತ್ರಾಸ್ತ್ರ ಪರವಾನಗಿ ನಿರಾಕ್ಷೇಪಣಾ/ನವೀಕರಣ ಕುರಿತು ಶಸ್ತ್ರಾಸ್ತ್ರ ಕಾಯ್ದೆ, 1959 ಹಾಗೂ ಶಸ್ತ್ರಾಸ್ತ್ರ ನಿಯಮ 2016ರನ್ವಯ ಕ್ರಮವಹಿಸಲಾಗುತ್ತಿದ್ದು, ಸರಳೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಉ) | ರೈತರ ಹಿತದೃಷ್ಟಿಯಿಂದ ಪರವಾನಿಗೆ ನವೀಕರಣ ಅರ್ಜಿಗಳ ವಿಲೇವಾರಿಗೆ ಸಮಯಬದ್ಧ ವ್ಯವಸ್ಥೆ ಜಾರಿಗೊಳಿಸಲು ಸರ್ಕಾರ ಉದ್ದೇಶಿಸಿದೆಯೇ? | ಪ್ರಸ್ತಾವನೆ ಇರುವುದಿಲ್ಲ. |

ಹೆಚ್‌ಡಿ 177 ಶಿಎಎ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು

ಅನುಬಂಧ

ಮಂಗಳೂರು ನಗರ

| ತಾಲ್ಲೂಕು | ವರ್ಷ | ಬಂದೂಕು ಪರವಾನಿಗೆ ನವೀಕರಣಕ್ಕೆ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ನವೀಕರಿಸಲಾದ ಪರವಾನಗಿಗಳ ಸಂಖ್ಯೆ | NOC ಬಾಕಿ ಇರುವ ಅರ್ಜಿಗಳ ಸಂಖ್ಯೆ |
|---|---|---|---|---|
| ಮಂಗಳೂರು ನಗರ | 2023 | 34 | 34 | ಮಂಗಳೂರು ನಗರ ಕಮೀಷನರೇಟ್ ವ್ಯಾಪ್ತಿಗೆ ಅನ್ವಯಿಸುವುದಿಲ್ಲ. |
| | 2024 | 97 | 97 | |
| | 2025 | 298 | 298 | |
| | 2026 (31.07.2026) | 87 | 72 | |

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು

| ವರ್ಷ | ಬಂದೂಕು ಪರವಾನಿಗೆ ನವೀಕರಣಕ್ಕೆ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | | ನವೀಕರಿಸಲಾದ ಪರವಾನಗಿಗಳ ಸಂಖ್ಯೆ | | NOC ಬಾಕಿಯಿರುವ ಅರ್ಜಿಗಳ ಸಂಖ್ಯೆ |
|---|---|---|---|---|---|
| 2023 | - | | - | | - |
| 2024 | ತಾಲೂಕು | ನವೀಕರಣಕ್ಕೆ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ತಾಲೂಕು | ನವೀಕರಿಸಲಾದ ಅರ್ಜಿಗಳ ಸಂಖ್ಯೆ | - |
| | ಸುಳ್ಯ | 195 | ಸುಳ್ಯ | 188 | |
| | ಕಡಬ | 52 | ಕಡಬ | 47 | |
| | ಬೆಳ್ತಂಗಡಿ | 48 | ಬೆಳ್ತಂಗಡಿ | 44 | |
| | ಪುತ್ತೂರು | 43 | ಪುತ್ತೂರು | 39 | |
| | ಬಂಟ್ವಾಳ | 29 | ಬಂಟ್ವಾಳ | 21 | |
| | ಒಟ್ಟು | 367 | ಒಟ್ಟು | 339 | |
| 2025 | ತಾಲೂಕು | ನವೀಕರಣಕ್ಕೆ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ತಾಲೂಕು | ನವೀಕರಿಸಲಾದ ಅರ್ಜಿಗಳ ಸಂಖ್ಯೆ | - |
| | ಸುಳ್ಯ | 163 | ಸುಳ್ಯ | 117 | |
| | ಕಡಬ | 34 | ಕಡಬ | 15 | |
| | ಬೆಳ್ತಂಗಡಿ | 38 | ಬೆಳ್ತಂಗಡಿ | 16 | |
| | ಪುತ್ತೂರು | 42 | ಪುತ್ತೂರು | 14 | |
| | ಬಂಟ್ವಾಳ | 21 | ಬಂಟ್ವಾಳ | 7 | |
| | ಒಟ್ಟು | 298 | ಒಟ್ಟು | 169 | |
| 2026 (31.07.2026) | ತಾಲೂಕು | ನವೀಕರಣಕ್ಕೆ ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ | ತಾಲೂಕು | ನವೀಕರಿಸಲಾದ ಅರ್ಜಿಗಳ ಸಂಖ್ಯೆ | 16 |
| | ಸುಳ್ಯ | 30 | ಸುಳ್ಯ | 19 | |
| | ಕಡಬ | 4 | ಕಡಬ | 1 | |
| | ಬೆಳ್ತಂಗಡಿ | 10 | ಬೆಳ್ತಂಗಡಿ | 3 | |
| | ಪುತ್ತೂರು | 5 | ಪುತ್ತೂರು | 3 | |
| | ಬಂಟ್ವಾಳ | 5 | ಬಂಟ್ವಾಳ | 0 | |
| | ಒಟ್ಟು | 54 | ಒಟ್ಟು | 26 | |